# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 20 ಕವಿಇ 2012

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 26.07.2012.

## ಅಧಿಸೂಚನೆ

ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ, 1978ರ 3ನೇ ಪ್ರಕರಣದ (2)ನೇ ಉಪ ಪ್ರಕರಣದ ಪರಂತುಕದೊಡನೆ ಓದಿಕೊಂಡು ಅದೇ 3ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಮೂಲಕ 1958ರ ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮಾ) ನಿಯಮಗಳನ್ನು ಮತ್ತಷ್ಟು ತಿದ್ದುಪಡಿ ಮಾಡಲು ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸಿದೆ, ಅಂದರೆ:-

1. **ಶೀರ್ಷಿಕೆ ಮತ್ತು ಪ್ರಾರಂಭ:-** (1) ಈ ನಿಯಮಗಳನ್ನು ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮಾ)(ತಿದ್ದುಪಡಿ) ನಿಯಮಗಳು, 2012 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು 2012ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **8ನೇ ನಿಯಮದ ಪ್ರತಿಯೋಜನೆ:-** ಕರ್ನಾಟಕ ಸರ್ಕಾರಿ ನೌಕರರ (ಕಡ್ಡಾಯ ಜೀವ ವಿಮಾ) ನಿಯಮಗಳು, 1958ರ ನಿಯಮ 8ಕ್ಕೆ ಕೆಳಕಂಡ ನಿಯಮವನ್ನು ಪ್ರತಿಯೋಜಿಸತಕ್ಕದ್ದು, ಅಂದರೆ:-

"8(1) ಕರ್ನಾಟಕ ಸರ್ಕಾರಿ ವಿಮಾ ಇಲಾಖೆಯಲ್ಲಿ ಜೀವ ವಿಮೆ ಮಾಡಿಸಿರುವ ಅಥವಾ ಮಾಡಿಸುವ ಒಬ್ಬ ಸರ್ಕಾರಿ ನೌಕರನು ಸಂದಾಯ ಮಾಡಬೇಕಾದ ತಿಂಗಳ ಕಂತಿನ ಕನಿಷ್ಠ ದರವನ್ನು ಕೆಳಗಿನ ಕೋಷ್ಟಕದಲ್ಲಿ ಸೂಚಿಸಿರುವಂತೆ ಅವನು ಧಾರಣ ಮಾಡಿರುವ ಹುದ್ದೆಯ ವೇತನ ಶ್ರೇಣಿಗನುಗುಣವಾಗಿ ನಿಗದಿಪಡಿಸತಕ್ಕದ್ದು.

**ಕೋಷ್ಟಕ**

| ಕ್ರಮ ಸಂಖ್ಯೆ | ವೇತನ ಶ್ರೇಣಿ (ರೂ. ಗಳಲ್ಲಿ) | ಕನಿಷ್ಠ ಮಾಸಿಕ ವಿಮಾ ಕಂತಿನ ಮೊಬಲಗು (ರೂ. ಗಳಲ್ಲಿ) |
|---|---|---|
| 1. | 9600-14550 | 750 |
| 2. | 10400-16400 | 840 |
| 3. | 11000-19000 | 940 |
| 4. | 11600-21000 | 1020 |
| 5. | 12500-24000 | 1140 |
| 6. | 13600-26000 | 1240 |
| 7. | 14550-26700 | 1290 |
| 8. | 16000-29600 | 1430 |
| 9. | 17650-32000 | 1550 |
| 10. | 19000-34500 | 1670 |
| 11. | 20000-36300 | 1760 |
| 12. | 21600-40050 | 1930 |
| 13. | 22800-43200 | 2060 |
| 14. | 24000-45300 | 2170 |
| 15. | 26000-47700 | 2300 |
| 16. | 28100-50100 | 2440 |
| 17. | 30400-51300 | 2550 |
| 18. | 32800-52500 | 2670 |
| 19. | 36300-53850 | 2820 |
| 20. | 38100-55200 | 2920 |
| 21. | 40050-56550 | 3020 |
| 22. | 44250-60600 | 3280 |

…2

| | | |
|---|---|---|
| 23. | 48900-63600 | 3520 |
| 24. | 52500-73000 | 3920 |
| 25. | 56550-79800 | 4260 |

(2) ಒಬ್ಬ ಸರ್ಕಾರಿ ನೌಕರನು, ತಾನು ಧಾರಣ ಮಾಡಿರುವ ಹುದ್ದೆಯ ವೇತನ ಶ್ರೇಣಿಗೆ ಗೊತ್ತುಪಡಿಸಿರುವ ಕನಿಷ್ಠ ವಿಮಾ ಕಂತಿಗಿಂತ ಹೆಚ್ಚಿನ ವಿಮಾ ಕಂತಿಗೆ ವಿಮೆ ಮಾಡಿಸಲು ಅಪೇಕ್ಷಿಸಿದರೆ, ಆತನು ಹಾಗೆ ಮಾಡಬಹುದು.

(3) ಒಬ್ಬ ಸರ್ಕಾರಿ ನೌಕರನು, ತಾನು ಧಾರಣ ಮಾಡಿರುವ ವೇತನ ಶ್ರೇಣಿಗಿಂತ ಹೆಚ್ಚು ವೇತನ ಶ್ರೇಣಿಯುಳ್ಳ ಒಂದು ಹುದ್ದೆಗೆ ಬಡ್ತಿ ಹೊಂದಿದರೆ ಅಥವಾ ನೇಮಕಗೊಂಡರೆ ಹಾಗೂ ಆತನಿಗೆ ಮೊದಲಿನ ಹುದ್ದೆಗೆ ಹಿಂಬಡ್ತಿ ನೀಡುವ ಸಂಭವ ಇಲ್ಲದಿದ್ದರೆ, ಅವನು ಬಡ್ತಿ ಹೊಂದಿದ ಅಥವಾ ನೇಮಕಗೊಂಡ ಹುದ್ದೆಗೆ ಅನ್ವಯಿಸುವ ವೇತನ ಶ್ರೇಣಿಗೆ ಗೊತ್ತುಪಡಿಸಲಾದ ಮಾಸಿಕ ಕಂತಿನ ಕನಿಷ್ಠ ಮೊಬಲಗಿಗಿಂತ ಕಡಿಮೆ ಇರದಂತಹ ಒಟ್ಟು ಕಂತಿಗೆ ಸಮನಾದ ಮೊಬಲಗಿಗೆ ಮತ್ತಷ್ಟು ವಿಮೆ ಮಾಡತಕ್ಕದ್ದು.

ಪರಂತು, ಸರ್ಕಾರಿ ನೌಕರನಿಗೆ ಹಿಂಬಡ್ತಿ ನೀಡುವ ಸಾಧ್ಯತೆ ಇಲ್ಲವೆಂದು ನೇಮಕಾತಿ ಪ್ರಾಧಿಕಾರವು ಪ್ರಮಾಣೀಕರಿಸಿದ ಹೊರತು, ಆತನ ಮಾಸಿಕ ಕಂತಿನ ದರವನ್ನು ಹೆಚ್ಚಿಸಲು ಅನುಮತಿಸತಕ್ಕದ್ದಲ್ಲ.

(4) 1983ರ ಕರ್ನಾಟಕ ಸಿವಿಲ್ ಸೇವೆಗಳ (ಕಾಲಬದ್ಧ ಬಡ್ತಿ) ನಿಯಮಗಳ ಅಥವಾ 1991ರ ಕರ್ನಾಟಕ ಸಿವಿಲ್ ಸೇವೆಗಳ (ಹಿರಿಯ ವೇತನ ಶ್ರೇಣಿಗೆ ಸ್ವಯಂ ಚಾಲಿತ ವಿಶೇಷ ಮುಂಬಡ್ತಿ ನೀಡುವಿಕೆ) ನಿಯಮಗಳ ಉಪಬಂಧಗಳಿಗೆ ಅನುಸಾರವಾಗಿ, ಒಬ್ಬ ಸರ್ಕಾರಿ ನೌಕರನಿಗೆ ಅವನು ಧಾರಣ ಮಾಡಿರುವ ಹುದ್ದೆಗೆ ನೀಡಲಾದ ಆಯ್ಕೆ ಕಾಲಿಕ ವೇತನ ಶ್ರೇಣಿ ಅಥವಾ ಹಿರಿಯ ವೇತನ ಶ್ರೇಣಿಯನ್ನು ನೀಡಲಾಗಿದ್ದರೆ, ಅದಕ್ಕನುಗುಣವಾಗಿ ಸದರಿ ಆಯ್ಕೆ ಕಾಲಿಕ ವೇತನ ಶ್ರೇಣಿ ಅಥವಾ ಹಿರಿಯ ವೇತನ ಶ್ರೇಣಿಗೆ ಗೊತ್ತುಪಡಿಸಿರುವ ಕನಿಷ್ಠ ಮಾಸಿಕ ವಿಮಾ ಕಂತಿನ ಮೊಬಲಗಿಗಿಂತ ಕಡಿಮೆ ಇರದಷ್ಟು ಒಟ್ಟು ವಿಮಾ ಕಂತಿಗೆ ಸಮನಾದ ಮೊಬಲಗಿಗೆ ಮತ್ತಷ್ಟು ವಿಮೆ ಮಾಡತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎನ್. ಲಕ್ಷ್ಮಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

ಇವರಿಗೆ:
ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು–ಮುಂದಿನ ವಾರ ಪತ್ರದಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ಆರ್ಥಿಕ ಇಲಾಖೆಗೆ (ಮುಂಗಡ ಶಾಖೆ) ಕಳುಹಿಸುವಂತೆ ಕೋರಲಾಗಿದೆ.
ಪ್ರತಿ:

1. ಮಹಾಲೇಖಪಾಲರು (ಎಮತ್ತುಇ), ಕರ್ನಾಟಕ, ಬೆಂಗಳೂರು,
2. ಮುಖ್ಯ ಕಾರ್ಯದರ್ಶಿಯವರು/ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು,
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು,
4. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಗುಲ್ಬರ್ಗ, ಬೆಳಗಾಂ,
5. ಎಲ್ಲಾ ಇಲಾಖಾ ಮುಖ್ಯಸ್ಥರು,
6. ಎಲ್ಲಾ ಜಿಲ್ಲಾಧಿಕಾರಿಗಳು,
7. ಎಲ್ಲಾ ಜಿಲ್ಲಾಪಂಚಾಯತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
8. ನಿರ್ದೇಶಕರು, ಕರ್ನಾಟಕ ಸರ್ಕಾರಿ ವಿಮಾ ಇಲಾಖೆ, ಬೆಂಗಳೂರು,
9. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು,
10. ಅಧ್ಯಕ್ಷರು, ಕರ್ನಾಟಕ ಸರ್ಕಾರಿ ನೌಕರರುಗಳ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು,
11. ಕಛೇರಿ ಪ್ರತಿ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಈ ಅಧಿಸೂಚನೆಯ ಪ್ರತಿ ಆರ್ಥಿಕ ಇಲಾಖೆಯ ವೆಬ್‌ಸೈಟ್ www.finance.kar.nic.in ನಲ್ಲಿ ಲಭ್ಯವಿದೆ.

# GOVERNMENT OF KARNATAKA

No. FD 20 KGID 2012

Karnataka Government Secretariat,
Vidhana Soudha,
Bangalore, dated:26.07.2012

## NOTIFICATION

In exercise of the powers conferred by sub-section (1) of Section 3, read with the proviso to sub-section (2) of Section 3 of the Karnataka State Civil Services Act, 1978 (Karnataka Act No. 14 of 1990), the Government of Karnataka hereby makes the following rules further to amend the Karnataka Government Servants' (Compulsory Life Insurance) Rules, 1958, namely:-

1. **Title and commencement**:- (1) These rules may be called the Karnataka Government Servants' (Compulsory Life Insurance) (Amendment) Rules, 2012.

(2) They shall be deemed to have come into force with effect from the first day of April, 2012.

2. **Substitution of rule 8:-** For rule 8 of the Karnataka Government Servants' (Compulsory Life Insurance) Rules, 1958, the following shall be substituted, namely:-

"8(1) The minimum rate of monthly premium payable by a Government servant who has assured or who assures his life in the Karnataka Government Insurance Department shall be fixed, as indicated in the table below, with reference to the scale of pay of the post held by him.

**Table**

| Sl.No. | Scale of Pay (in Rs.) | Amount of minimum monthly premium (in Rs.) |
|---|---|---|
| 1. | 9600-14550 | 750 |
| 2. | 10400-16400 | 840 |
| 3. | 11000-19000 | 940 |
| 4. | 11600-21000 | 1020 |
| 5. | 12500-24000 | 1140 |
| 6. | 13600-26000 | 1240 |
| 7. | 14550-26700 | 1290 |
| 8. | 16000-29600 | 1430 |
| 9. | 17650-32000 | 1550 |
| 10. | 19000-34500 | 1670 |
| 11. | 20000-36300 | 1760 |
| 12. | 21600-40050 | 1930 |
| 13. | 22800-43200 | 2060 |
| 14. | 24000-45300 | 2170 |
| 15. | 26000-47700 | 2300 |
| 16. | 28100-50100 | 2440 |
| 17. | 30400-51300 | 2550 |
| 18. | 32800-52500 | 2670 |
| 19. | 36300-53850 | 2820 |
| 20. | 38100-55200 | 2920 |
| 21. | 40050-56550 | 3020 |
| 22. | 44250-60600 | 3280 |

| | | |
|---|---|---|
| 23. | 48900-63600 | 3520 |
| 24. | 52500-73000 | 3920 |
| 25. | 56550-79800 | 4260 |

(2) A Government servant may, at his option propose insurance on a premium higher than the minimum prescribed for the scale of pay of the post held by him.

(3) Where a Government servant is promoted or appointed to a post carrying a scale of pay higher than that held by him and there is no likelihood of his reversion to his original post, he shall so effect further insurance as will make the total premium equal to an amount which shall not be less than the minimum amount of monthly premium prescribed for the scale of pay applicable to the post to which he is promoted or appointed.

Provided that the Government Servant shall not be allowed to increase the rate of his monthly premium unless the appointing authority certifies that the Government Servant is not likely to be reverted.

(4) A Government servant who is granted selection time scale of pay or senior scale of pay assigned to the post held by him, in accordance with the provisions of the Karnataka Civil Services (Time Bound Advancement) Rules, 1983 or the Karnataka Civil Services (Automatic Grant of Special Promotion to Senior Scale of Pay) Rules, 1991 shall so effect such further insurance as will make the total premium equal to an amount which shall not be less than the minimum amount of monthly premium prescribed for the said selection time scale of pay or the senior scale of pay, as the case may be.”

By order and in the name of the
Governor of Karnataka,

(N. LAKSHMANA)
Under Secretary to Government
Finance Department (Admn. & Advances)

To:
The Compiler, Karnataka Gazette, Bangalore - for publication in the next issue of the extra ordinary Gazette and to supply 100 copies to the Finance Department (Advances).

Copy to:

1. Accountant General (A&E), Karnataka, Bangalore,
2. Chief Secretary/All the Additional Chief Secretaries,
3. All the Principal Secretaries/Secretaries to Government,
4. The Regional Commissioners, Bangalore, Mysore, Belgaum, Gulbarga,
5. All the Heads of Departments,
6. All the Deputy Commissioners,
7. Chief Executive Officers of all Zilla Panchayats,
8. The Director, Karnataka Government Insurance Department, Bangalore,
9. The Director, Treasury Department, Bangalore,
10. The President, Karnataka State Government Employees Association, Cubbon Park, Bangalore,
11. Section Guard File/Spare Copies.

Copy of this Notification is available in website: www.finance.kar.nic.in